4829

ಫಿನಾನ್ಷಿಯಲ್ ಇಲಾಖೆ.

ಶ್ಯಾನುಭೋಗ ವ ಪಟೇಲರ ತಲಬು ಬಗ್ಗೆ ಬಿಲ್ಲುಗಳು.

ನಂ. ತಾರೀಖು 23ನೇ ಅಕ್ಟೋಬರ್ 1876. ಸರ್ಕ್ಯುಲರ್ ನಂಬರ್ 1293.

ಡಿಪ್ಯುಟಿಕಮ್ಮಿಷನರ್ ಟ್ರೆಜರಿ ಆಫಿಸರ್ ವ ಅಮಲ್ದಾರ್ ಯಿವರುಗಳಿಗೆ ಸ್ 1876ನೇ ಇಸವಿ ಸೆಪ್ಟಂಬರು 22ನೇ ತಾರೀಕ್ 6118—189ನೇ ನಂಬರ್ ಚೀಫ್ ಕಮ್ಮಿಷನರವರ ಪ್ರೊಸೀಡಿಂಗ್ಸು 10ನೇ ಕಲಂ ಅನುಸರಿಸಿ ಮೈಸೂರು ಸೀಮೆಯ ಡಿಪ್ಯುಟಿ ಅಕೌಂಟೆಂಟ್ ಜನರಲ್ ಯವರು ಡಿಸ್ಟ್ರಿಕ್ಟುಗಳ ಡಿಪ್ಯುಟಿ ಕಮ್ಮಿಷನರ್‌ಗಳನ್ನು ಕೇಳಿಕ್ಕೊಳ್ಳುವ ದೇನಂದರೆ- ಶ್ಯಾನುಭೋಗ ಪಟೇಲರಿಗೆ ಪ್ರತಿ ತಾಲ್ಲೂಕಿನಲ್ಲಿ ಸರಕಾರದಿಂದ ಅವರಿಗೆ ಸಲ್ಲತಕ್ಕ ತಲಬು ಬಗ್ಗೆ ತಪಶೀಲ್ ವಾರಾಗಿರುವ ವೊಂದು ಪಟ್ಟಿಯನ್ನು, ಅದರಲ್ಲಿ ಚೀಫ್ ಕಮ್ಮಿಷನರವರ ಸಾಂಕ್ಷನ್ ತಾರೀಕ್ ನಮೂದಿಸಿ, ಶ್ಯಾನುಭೋಗರಪಟ್ಟಿ ಸೀ ಮಾಹೇ ಪ್ರಕಾರವೂ ಪಟೇಲರ ಪಟ್ಟಿ ಸಾಲೀ ಯಾನಾ ಪ್ರಕಾರವೂ ಮುಂದಾಗಿ ತನಿಖೀ ಆಗತಕ್ಕ ಬಗ್ಗೆ ನಮ್ಮಲ್ಲಿಗೆ ಕಳುಹಿಸಿಕೊಡಬೇಕು.

ಈ ಪಟ್ಟಿಗಳು ತಾಲ್ಲೂಕು ಸಿಬ್ಬಂದಿ ಪಟ್ಟಿಯ ನಮೂನೇ ಪ್ರಕಾರ ತಯಾರ್ಮಾಡಲ್ಪಟ್ಟು "ಅವುಗಳ ಸಿರ್ನಾಮೆಯಲ್ಲಿ ಗ್ರಾಮ ನೌಕರರ ತಲಬುಗಳ ಪಟ್ಟಿ" ಯಂಬದಾಗಿ ಬರಿಯಲ್ಪಡತಕ್ಕದ್ದು, ಮತ್ತು "ಆಯದ ರಿವಾಜು ಲಾಕ್ಸ್ನ್ ಬಗ್ಗೆ ಕಂಪೆನ್ಸೇಷನ್ ಯಾನೇ ಈಡು ವೊಬಲಗ" ಯಂಬ ಹೆಡ್ಡಿಗೆ ಯಿದುವರಿಗೂ ಖರ್ಚು ಬರಿಯಲ್ಪಡುತ್ತಿರುವದಕ್ಕೆ ಬದಲಾಗಿ ಖರ್ಚಾನೇ ಲೆಖಗಳಲ್ಲಿ "ಗ್ರಾಮ ನವಕರರ ತಲಬು" ಯಂಬ ಹೆಡ್ಡಿಗೆ ಖರ್ಚು ಬರಿಯಲ್ಪಡತಕ್ಕದ್ದು.

H. HUDSON,
Ly. Accti. General in Mysore.

ಪಬ್ಲಿಕ್ ವರ್ಕ್ಸ್ ಇಲಾಖೆ.

ತಾರೀಖು 19ನೇ ಅಕ್ಟೋಬರ್ 1876.

ಹೇಮಾವತಿ ಡಿವಿಜ್ ಚಾನಲ್ ಡಿಸ್ಟ್ರಿಕ್ಟಿಗೆ ಸೇರಿದ ಸಬ್ ಸರ್ವೆಯರ್ ಬೆಂಜಮಿನ್ ನಾಯಿಡು ಯವರಿಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಕ್ ಲಗಾಯಿತು ನೊಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೇ ಅಕ್ಟೋಬರ್ 1876.

ಕಾವೇರಿ ಡಿವಿಜ್ ಚಾನಲ್ ಕ್ಯಸರ್ವೆಸಿಗೆ ಸೇರಿದ ಸಬ್ ಓವರ್‌ಸೀರ್ ರಾಮರಾಯರು 1876ನೇ ಯಿಸವಿ ಮೇ 5ನೇ ತಾರೀಕ್ ಲಗಾಯಿತು ಜೂ 28ನೇ ತಾರೀಖುವರಿಗೆ ಬಗರ್ ತಲಬು ರಜಾ ಕೊಡಲ್ಪಟ್ಟಿದ್ದರು.

W. CHRYSTIE, *Major*, R. E.,
Suptg. Engr. for Irrigation.

ತಾರೀಖು 21ನೇ ಅಕ್ಟೋಬರ್ 1876.

ಕೊಡಗು ಡಿವಿಜ್ ಸಬ್ ಓವರಸೀರ್ ಶ್ರೀನಿವಾಸ್ಯೆಯಂಗಾರ್ರಿಗೆ ಆವರು ಉಪಯೋಗಿಸಿಕೊಳ್ಳುವ ತಾರೀಕ್ ಲಗಾಯಿತು ಹನ್ನೆರಡು ದಿನಗಳ ಪ್ರಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

C. BOWEN, *Captain*, R. E.,
Offg. Suptg. Engr. R. and B. Branch.

ಫಾರೆಸ್ಟ್ ಇಲಾಖೆ.

ಇಸ್ತಹಾರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬೂಬತು ಸಂದಲ್‌ವುರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಹುಣಸೂರು,	4ನೇ	ನವಂಬರ್ 1876	ಹೆಚ್ಚು ಕಡಮೆ 560 ಟ್ಯಗಳ ವಜನಿ.
ಶ್ರೀರಂಗಪಟ್ಟಣ,	8ನೇ	,, ,,	
ಬೆಂಗಳೂರು,	1ನೇ	ಡಿಸಂಬರ್ ,,	ಹೆಚ್ಚು ಕಡಮೆ 100 ಟ್ಯಗಳು.
ಫ್ರೇಜರ್‌ಪೇಟೆ	18ನೇ	,, ,,	80 ,,

ಹರಾಜ್ ನಿಬಂಧನೆ—ಹರಾಜ್ ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್ ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವೆಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗೆಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳೆಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯು ಹರಾಜ್‌ಗಳು ನವೆಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಿಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವೆಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಕೀರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಕ್ಯೂಬ್ಸ್, ಪೌಂಡ್, ಹಂಡ್ರೆಡ್ ಕಯಿಟ್ ಟರ್ಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಘೋರೆಸ್ಟ್ ಯಿಲಾಖೆಗೆ ಸೇರಿದ ಜಂಗ್ಲೀಗಳು ತಿವಾಯಿ) ಬೆಂಗಳೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟು 1877—78,—1878—79,—1879—80,—1880–81, ಮತ್ತು 1881–82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಿಲ್ 1ನೇ ಮುಕ್ತಂ ಲಗಾಯತ್ 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚಡ್ಡಿ ದರಖಾಸ್ತು ವಾರ್ಯಿಗೆ ಹರಾಜ್ ಮೂಲಕ 1877ನೇ ಮಾರ್ಚಿ 10ನೇ ಮುಕ್ತಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಚಡ್ಡಿ ದರಖಾಸ್ತುದಾರನು, ತನ್ನ ದರಖಾಸ್ತು ಮುಂಜೂರಾದ ಮೇಲೆ, ಕರೆನ್ಸೀ ನೋಟ್‌ಗಳು ಯಾ ನಗದುಹಣ. ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟು ಮೊಬಲಗ್ ಪೈಕೀ 60 ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಗೀತು.

3. ಮುಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟ್ಯನೊಳಗೆ 1877ನೇ ಏಪ್ರಿಲ್ 1ನೇ ಮುಕ್ತಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಖಿಸ್ತನ್ನು 1877ನೇ ಮೇ 15ನೇ ಮುಕ್ತಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ತಂನಲ್ಲಾಗಲಿ ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್‌ಬತ್ತಿ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟು ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯೆರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನಿಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯ ವಿಲ್ಲದೆಯೇ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.